# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 488
2. ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
3. ಉತ್ತರಿಸಬೇಕಾದ ದಿನಾಂಕ : 16-12-2021

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೊಡಗು ಜಿಲ್ಲೆಯ ಹಲವಾರು ನದಿಗಳಲ್ಲಿ ಸಾಕಷ್ಟು ಹೂಳು ತುಂಬಿದ್ದು, ಅಕ್ಕಪಕ್ಕದ ಸಾಗುವಳಿ ಜಮೀನುಗಳು ಕೊಚ್ಚಿಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೊಡಗು ಜಿಲ್ಲೆಯ ಕಾವೇರಿ ಮತ್ತು ಹಾರಂಗಿ ನದಿ ಪಾತ್ರದಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ :<br>1. ಕಾವೇರಿ ನದಿ ಪಾತ್ರದಲ್ಲಿ ಕುಶಾಲನಗರದ ಕೊಪ್ಪ ಸೇತುವೆ ಬಳಿ ನೀರಿನ ಹರಿವಿಗೆ ಅಡಚಣೆಯಾಗಿದ್ದ 4300 ಮೀ. ಉದ್ದಕ್ಕೆ ಹಾಗೂ ತಪೋವನದ ಬಳಿ 2000 ಮೀ ಉದ್ದಕ್ಕೆ ಜೊಂಡು ಹಾಗೂ ಮಣ್ಣು ಮಿಶ್ರಿತ ಹೂಳು ತೆಗೆಯುವ ಕಾಮಗಾರಿಯನ್ನು National Disaster Response Fund (NDRF) ಲೆಕ್ಕಶೀರ್ಷಿಕೆಯಡಿ 2020-21ನೇ ಸಾಲಿನಲ್ಲಿ ರೂ.88.00 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.<br>2. ಕಾವೇರಿ ನದಿಯ ಉಗಮಸ್ಥಾನ ಭಾಗಮಂಡಲದಿಂದ ನದಿಯ ನೀರಿನ ಹರಿವಿಗೆ ಅಡಚಣೆಯಾಗಿರುವ ಗಿಡಗಂಟೆಗಳು ಮತ್ತು ಜೊಂಡನ್ನು ತೆಗೆಯಲು ಕಾವೇರಿ ನದಿಯ 11.50 ಕಿ.ಮೀ & ಉಪನದಿ ಕನ್ನಿಕೆಯ 6.20 ಕಿ.ಮೀ ಮತ್ತು ಇತರ ಉಪನದಿಗಳು 12.00 ಕಿ.ಮೀ ಉದ್ದಕ್ಕೆ ಸರಾಸರಿ 10.00 ರಿಂದ 50.00 ಮೀ. ಅಗಲದವರೆಗೆ ತೆರವುಗೊಳಿಸುವ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮದ ವತಿಯಿಂದ ರೂ.79.18 ಲಕ್ಷಗಳಲ್ಲಿ 2020-21ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.<br>3. ಕಾವೇರಿ ನೀರಾವರಿ ನಿಗಮದ ವತಿಯಿಂದ ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿಯನ್ನು ಕೈಗೊಳ್ಳಲು ರೂ.130.00 ಕೋಟಿಗಳ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿದೆ.<br>4. ಪ್ರಸಕ್ತ ಆರ್ಥಿಕ ವರ್ಷದಲ್ಲಿ National Disaster Response Fund (NDRF) ಲೆಕ್ಕಶೀರ್ಷಿಕೆಯಡಿ ರೂ.50.00 ಲಕ್ಷಗಳ ಮೊತ್ತದ 3 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಪ್ರಸ್ತುತ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿದೆ. |
| ಆ | ಬಂದಿದ್ದಲ್ಲಿ, ಸದರಿ ನದಿಗಳಲ್ಲಿನ ಹೂಳನ್ನು ಈಗಾಗಲೇ ಸಂಪೂರ್ಣವಾಗಿ ಹೊರತೆಗೆಯಲಾಗಿದೆಯೇ; | |
| ಇ | ಸದರಿ ನದಿಗಳಲ್ಲಿನ ಹೂಳನ್ನು ಹೊರತೆಗೆಯುವ ಕಾಮಗಾರಿಗಳಿಗೆ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಒದಗಿಸಿರುವ ಅನುದಾನದ ವಿವರಗಳೇನು; | ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಿದೆ. |
| ಈ | ಪ್ರಸ್ತುತ ಆರ್ಥಿಕ ವರ್ಷದಲ್ಲಿ ಒದಗಿಸಿರುವ ಅನುದಾನದಲ್ಲಿ ಇದುವರೆಗೂ ಕೈಗೊಂಡಿರುವ ಕಾಮಗಾರಿಗಳಾವುವು? (ಸಂಪೂರ್ಣ ವಿವರಗಳನ್ನು ನೀಡುವುದು) | |

***ಸಂಖ್ಯೆ:ಜಸಂಇ 190 ಎನ್‌ಎಲ್‌ಎ 2021***

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 488(476) ಕ್ಕೆ ಅನುಬಂಧ-1

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ವರ್ಷ | ಅಂದಾಜು ಮೊತ್ತ | ಗುತ್ತಿಗೆ ಮೊತ್ತ | ಅನುದಾನ (2021-22) | ವೆಚ್ಚ (30.11.2021) | ಷರಾ |
|---|---|---|---|---|---|---|---|
| **ನಿಗಮದ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು** | | | | | | | |
| 1 | ಕಾವೇರಿ ನದಿಯ ಪುನಶ್ಚೇತನದ ಭಾಗವಾಗಿ ಕಾವೇರಿ ಮತ್ತು ಕನ್ನಿಕೆ ಉಪನದಿಗಳಲ್ಲಿ ಇವುಗಳ ಉಗಮಸ್ಥಾನದಿಂದ ಭಾಗಮಂಡಲದ ಸಂಗಮದವರೆಗೆ ಮತ್ತು ಸಂಗಮದ ನಂತರದ 2 ಕಿ.ಮೀವರೆಗೆ ಗಿಡಗಂಟೆಗಳನ್ನು ತೆರವುಗೊಳಸುವುದು. | 2020-21 | 1.06 | 0.79 | 0.04 | 0.53 | ಭೌತಿಕವಾಗಿ ಪೂರ್ಣಗೊಂಡಿದೆ. ಬಿಲ್ಲು ಪಾವತಿಯಾಗಬೇಕಿದೆ. |
| 2 | ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿ | 2020-21 | 130.00 | 0.00 | 6.31 | 0.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |
| **National Disaster Response fund(NDRF) ವತಿಯಿಂದ ಕೈಗೊಂಡಿರುವ ಕಾಮಗಾರಿಗಳು** | | | | | | | |
| 1 | ಕೊಡಗು ಜಿಲ್ಲೆಯ ಕಾವೇರಿ ನದಿ ಬಳಿಯ ಕೊಪ್ಪ ಸೇತುವೆ ಹಾಗೂ ತಪೋವನದಲ್ಲಿ ಗಿಡಗಂಟೆಗಳನ್ನು ತೆರವುಗೊಳಸುವುದು. | 2020-21 | 0.88 | 0.87 | 0.87 | 0.13 | ಭೌತಿಕವಾಗಿ ಪೂರ್ಣಗೊಂಡಿದೆ. ಬಿಲ್ಲು ಪಾವತಿಯಾಗಬೇಕಿದೆ. |
| 2 | ಕಾವೇರಿ ನದಿಯ ಪುನರುಜ್ಜೀವನದ ಭಾಗವಾಗಿ ನಿಸರ್ಗಧಾಮದಿಂದ ಮಾದಾಪಟ್ಟಣದವರೆಗೆ ಕಾವೇರಿ ನದಿಯ ಉದ್ದಕ್ಕೂ ಗಿಡಗಂಟೆಗಳನ್ನು ತೆರವುಗೊಳಸುವುದು. | 2021-22 | 0.20 | 0.00 | 0.20 | 0.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |
| 3 | ಕಾವೇರಿ ನದಿಯ ಪುನರುಜ್ಜೀವನದ ಭಾಗವಾಗಿ ಮಾದಾಪಟ್ಟಣದಿಂದ ಗಾಣದಕೋಟೆದವರೆಗೆ ಕಾವೇರಿ ನದಿಯ ಉದ್ದಕ್ಕೂ ಗಿಡಗಂಟೆಗಳನ್ನು ತೆರವುಗೊಳಸುವುದು. | 2021-22 | 0.20 | 0.00 | 0.20 | 0.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |
| 4 | ಕಾವೇರಿ ನದಿಯ ಪುನರುಜ್ಜೀವನದ ಭಾಗವಾಗಿ ಗಾಣದಕೋಟೆಯಿಂದ ಬೈಚನಹಳ್ಳಿವರೆಗೆ ಕಾವೇರಿ ನದಿಯ ಉದ್ದಕ್ಕೂ ಗಿಡಗಂಟೆಗಳನ್ನು ತೆರವುಗೊಳಸುವುದು. | 2021-22 | 0.10 | 0.00 | 0.10 | 0.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |